

ಸಾಧ್ಯವೇ? ಅವರದೇ ಸಂಸಾರ, ಅವರದೇ ತಾಪತ್ರಯ.

ಮಗನಿಗೊಬ್ಬ ಮಗ ಹುಟ್ಟಿದ ಮೇಲೆ ಪರಿಸ್ಥಿತಿ ಒಂದಿಷ್ಟು ಸುಧಾರಿಸಿತು. ತಂಗಾಳಿಯಂತೆ ಒಳ ಹೊರಗೆ ಸುಳಿದಾಡಿಕೊಂಡಿರುತ್ತಿತ್ತು ಹುಡುಗ. ಅಜ್ಜನ ತೊಡೆಯೇರಿ ಕೂತು ತರಲೆ ಮಾಡುತ್ತಿತ್ತು. ತಾಂಬೂಲದ ತಟ್ಟೆಗೆ ಕೈ ಹಾಕುತ್ತಿತ್ತು. ಅವರ ಕೈ ಹಿಡಿದೆಳೆದು ಎಲ್ಲಾ ಇದ್ದಲ್ಲಿಗೆ ಕರೆದುಕೊಂಡು ಹೋಗುತ್ತಿತ್ತು, ಬಾಲ್ಯಸಹಜ ಮುಗ್ಧತೆಯಿಂದ. ಎಲ್ಲರೊಡನೆ ಬೆರೆಯಲು ಒಂದು ಅವಕಾಶ, ಅಹಂಗೆ ಧಕ್ಕೆಯಾಗದಂತೆ ಸಿಕ್ಕ ಅವಕಾಶ ಎಂದುಕೊಂಡು ಅದರ ಸದುಪಯೋಗ ಪಡಿಸಿಕೊಳ್ಳುತ್ತಿದ್ದರು ಮೂರ್ತಿಗಳು. 'ಘಟಿಂಗ, ಕೂತಲ್ಲಿ ಕೂರೋಕೆ ಬಿಡಲ್ಲ' ಎಂದು ಮೊಮ್ಮಗನ ಮೇಲೆ ಹುಸಿಕೋಪ ತೋರಿಸುತ್ತಿದ್ದರು. ಮೊಮ್ಮಗ ದೊಡ್ಡವನಾಗುತ್ತಿದ್ದಂತೆ ಶಿಥಿಲಗೊಂಡಿದ್ದ ಕೊಂಡಿ ಬೆಸೆದುಕೊಳ್ಳುತ್ತಿದೆ ಎಂದು ಅವರ ಅನಿಸಿಕೆ. ಏನೋ ಹಿತ, ಏನೋ ಸಮಾಧಾನ, ಹೀಗಿರುವಾಗ

***

ಅದೇನು ಅವಸರವಾಗಿತ್ತೋ ಹೆಂಡತಿಗೆ, ಥಟ್ಟನೆ ಕೈ ಕೊಡವಿಕೊಂಡು ಎಂಬಂತೆ ಎದ್ದುಬಿಟ್ಟಳು. 'ಹೀಗೂ ಸಾಧ್ಯವೇ?' ಎಂದು ಮೂರ್ತಿಗಳಿಗೆ ದಿಗ್ಭ್ರಮೆ. ಮನಸ್ಸಿಗೆ ಕಿರಿಕಿರಿಯಾದಾಗ ಅದನ್ನು ಹೊರ ಹಾಕಲು ಗಂಡನಿಗೆ ಸಿಗುವುದು ಹೆಂಡತಿ, ಹೆಂಡತಿಗೆ ಸಿಗುವುದು ಗಂಡ. ಒಂದು ವಯಸ್ಸಾದ ಮೇಲೆ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೊಡನೆ ಕೂಡಾ ಅಸಹನೆ ತೋರಿಸುವಂತಿಲ್ಲ. ಒರಟು ಮಾತಾಡುವಂತಿಲ್ಲ. ಏನಿದ್ದರೂ ಬೆಣ್ಣೆಯಲ್ಲಿ ಕೂದಲು ತೆಗೆದಂತೆ ನಯ, ನಾಜೂಕು. ಎಷ್ಟೋ ಸಲ ಮೂರ್ತಿಗಳು ಹೆಂಡತಿಯೊಡನೆ ಹೇಳುತ್ತಿದ್ದುದಿತ್ತು, 'ನಾನೇನಾದ್ರೂ ಗೊಟಕ್ ಅಂದ್ರೆ ನಿಂಗೆ ಇದ್ದಿದ್ದೂ ಸಲೀಸು ಕಣೇ. ಮಗನ ಬೆನ್ನು ಹತ್ತಿದ್ರೆ ಸೈ. ಮಾರಾಣಿ ಹಂಗೆ ನೋಡ್ಕಂತಾನೆ. ಪುಣ್ಯ ಮಾಡಿ ಹುಟ್ಟಿದ್ದಿ. ಒಳ್ಳೇ ಸೊಸೇನೂ ಸಿಕ್ಕಿದಾಳೆ...'

'ಮಾತೆತ್ತಿದ್ರೆ ಅಪಶಕುನ' ಅನ್ನುತ್ತಿದ್ದರು ಗಿರಿಜಮ್ಮ. ಮೂರ್ತಿಗಳ ಭವಿಷ್ಯ ಸತ್ಯವಾಗಲಿಲ್ಲ. ಬದಲಿಗೆ ಕೊರಳಿಗೆ ಉರುಳು ಸುತ್ತಿಕೊಂಡಿದ್ದು ಅವರಿಗೇ. ಮರಣ ಅಂದರೆ ಸುಖಮರಣ. ಯಾವ ಸುಳುಸೂಕ್ಷ್ಮವನ್ನೂ ಕೊಡದೆ ಕೋಳಿಪಿಳ್ಳೆಯನ್ನು ಗಿಡುಗ ಎತ್ತಿಕೊಂಡು ಹೋದ ಹಾಗೆ ಯಮಧರ್ಮರಾಯ ಹೆಂಡತಿಯನ್ನು ಎತ್ತಿಕೊಂಡು ಹೋದ. ಯಾವತ್ತಿನ ಹಾಗೆ ಮೇಲೋಗರಕ್ಕೆ ತರಕಾರಿ ಹೆಚ್ಚುತ್ತಿದ್ದಳು. ಮೆಟ್ಟುಗತ್ತಿಯ ಮೇಲಿಂದ ಏಳುವ ಹೊತ್ತಿಗೆ ಕಣ್ಣು ಕತ್ತಲೆ ಬಂದು, ತಲೆ ಸುತ್ತಿದಂತಾಗಿದ್ದು ಹೇಳಿ. ಅಲ್ಲೇ ಕಾಫಿ ಕುಡಿಯುತ್ತಾ ಕೂತಿದ್ದ ಮೂರ್ತಿಗಳು ಧಾವಿಸಿ ಹೋಗಿ ಹೆಂಡತಿಯನ್ನು ಆತುಕೊಳ್ಳದಿದ್ದರೆ ಮೆಟ್ಟುಗತ್ತಿಯ ಮೇಲೆ ಬಿದ್ದಿದ್ದರೂ ಆಶ್ಚರ್ಯವಿರುತ್ತಿರಲಿಲ್ಲ. 'ಬಿ. ಪಿ. ಗಿ.ಪಿ. ಶುರುವಾಗಿರಬೇಕು' ಎಂದು ಮೂರ್ತಿಗಳ ಅಂದಾಜು. ಸುದ್ದಿ ತಿಳಿಯುತ್ತಿದ್ದಂತೆ ಮಗ ಧಾವಿಸಿ ಬಂದು ಇಬ್ಬರನ್ನೂ ಕರೆದುಕೊಂಡು ಹೋಗಿದ್ದ. ಆಮೇಲೆ ಗಿರಿಜಮ್ಮ ಬದುಕುಳಿದಿದ್ದು ನಾಲ್ಕೇ ದಿನ. ಮಗನ ಜೊತೆಗಿರುವ ಸುಖ ಅವಳಿಗೆ ದಕ್ಕಲೇ ಇಲ್ಲ. ಮೆದುಳಿನಲ್ಲಿ ಮೂರ್ನಾಲ್ಕು ಕಡೆ ರಕ್ತ ಹೆಪ್ಪುಗಟ್ಟಿ ಬ್ಲಾಕ್ ಆಗಿತ್ತೆಂದು ವೈದ್ಯಕೀಯ ತಪಾಸಣೆಯ ವರದಿ. ಆಪರೇಷನ್ ಮಾಡಿದರೂ ಮಾಡದಿದ್ದರೂ ಕಷ್ಟ ಎನ್ನುವ ಪರಿಸ್ಥಿತಿ. ಇಷ್ಟಾಗುವವರೆಗೆ ಏನೂ ಗೊತ್ತಾಗಿರಲಿಲ್ಲ ಅಂದರೆ ಏನರ್ಥ? ವಿಧಿ ಎಂದು ಇದಕ್ಕೇ ಹೇಳುವುದಾ? ಒಟ್ಟಾರೆ ಸಾಯುವುದಕ್ಕೆ ಒಂದು ನೆಪ. ಸತ್ಯವನ್ನು ಜೀರ್ಣಿಸಿಕೊಳ್ಳಲಾಗದೆ ಮೂರ್ತಿಗಳು ಅಸಹಾಯಕರಂತೆ ಕಂಗೆಟ್ಟು ಹೋಗಿದ್ದರು.

***

'ಅಲ್ಲಿಗೇ ಬಂದ್ಬಿಡಿ ಮಾವಾ. ಒಬ್ರೇ ಇದ್ಕೊಂಡು ಕೊರಗ್ತಾ ಕೂತಿರ್ಬೇಡಿ...' ಆಹ್ವಾನ ಬಂದಿದ್ದು ರಾಧೆಯಿಂದ. ಉಸಿರೊಡೆಯಲಿಲ್ಲ ಮಗ. ಹಾಗೆಂದು ತನ್ನ ಕರ್ತವ್ಯದಿಂದ ವಿಮುಖನಾಗಲೂ ಇಲ್ಲ. ಕೃತಜ್ಞತೆ ಅವನಿಗೆ ಹೇಳಬೇಕೋ, ಸೊಸೆಗೆ ಹೇಳಬೇಕೋ ಗೊತ್ತಾಗುವುದಿಲ್ಲ ಮೂರ್ತಿಗಳಿಗೆ.